ಹೋದ ಹಾಗೆ ಏನೂ ಕೂಡುದಿಲ್ಲ. ನೀನು ಸಾ ನಾಕು ಕಾಸು ಸಂಪಾದನೆಯ ದಾರಿ ಕಂಡುಕೋ. ನಿನ್ನ ಅಕ್ಕಂದಿರ ಮದುವೆಗೆ ಮಾಡಿದ ಸಾಲ ತೀರಿಸ್ಲಿಕ್ಕೆ ನಂಗೆ ಸಾಯ ಆಗ್ತದೆ ಅಂತ ಗಿಳಿಗೆ ಹೇಳಿದ ಹಾಗೆ ಬುದ್ಧಿವಾದ ಹೇಳಿದೆ. ನನ್ನ ಹೆಂಡತಿ ಸುಮಂಗಲಾ ಅಂತ ಅವಳ ಹೆಸರು. ಅವನ ಕೈ ತನ್ನ ತಲೆಯ ಮೇಲೆ ಇಟ್ಟುಕೊಂಡು ಇಗ ಮಗಾ ಮಕ್ಕಳಿಲ್ಲ ನಮಿಗೆ. ನೀನೇ ನಮ್ಮನ್ನು ಕಡೇ ಕಾಲದಲ್ಲಿ ಸಾಕ ಬೇಕಾದವ. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗ ಅಂತ ಎಣಿಸಿ ನಿನ್ನನ್ನು ಸಾಕ್ತಾ ಇದ್ದೇವೆ. ನೀನೇ ನಮಿಗೆ ದಿಕ್ಕು ಅಂತ ದಿಣ್ಣ ಕೂಗಿದ್ದಿದ್ಲು. ಅವ ನಮ್ಮಿಬ್ಬರ ಕಾಲಿಗೆ ಬಿದ್ದು ಮಾಪಿ ಮಾಡಿ ಇನ್ನು ಮುಂದೆ ಹಾಗೆ ಮಾಡೂದಿಲ್ಲ ಅಂತ ಹೇಳಿದ್ದ. ಆದ್ರೆ...'

'ಏನು ಆದ್ರೆ? ಯೆಂತದಾಯ್ತು?' ಸಾಧು ಕೇಳಿದ.

ಆವತ್ತು ರಾತ್ರಿ ನಾವೆಲ್ಲ ಊಟ ಮಾಡಿ ಮಲಗಿದ್ದಷ್ಟೆ. ಬೆಳಗ್ಗೆದ್ದು ನೋಡಿದಾಗ ಅವ ಇಲ್ಲ. ಮಾತ್ರವಲ್ಲ, ತಿರುಪತಿ ದೇವರಿಗೆ ಮುಡಿಪು ಕಟ್ಟಿಟ್ಟ ದುಡ್ಡು, ಸುಮಂಗಲನ ಒಂದು ಜೊತೆ ಚಿನ್ನದ ಬಳೆ ಎಲ್ಲ ಕದ್ದು ಓಡಿಹೋಗಿದ್ದ.

'ಎಲ್ಲಿಗೆ?'

ಬೊಂಬಾಯಿಗೆ. ಅದು ನಮಿಗೆ ಗೊತ್ತಾದದ್ದು ಎಷ್ಟೋ ಸಮಯದ ಅನಂತರ. ಅವ ಆ ಚಿನ್ನ ಹಣ ಎಲ್ಲ ಹಿಡ್ಕೊಂಡು ಬೊಂಬಾಯಿಯಲ್ಲಿ ಒಂದು ಹೋಟ್ಲಿಗೆ ಹೋಗಿ ಸೇರಿದ್ದ ಅಂತೆ. ನಮ್ಮ ಊರಿನವರು ಒಬ್ಬರು ನೋಡಿದವರು ನಂಗೆ ತಿಳಿಸಿದರು. ಕೆಲವು ಸಮಯದ ನಂತ್ರ ಅವರ ಹತ್ರವೇ ಒಂದಿಷ್ಟು ಹಣ, ಸುಮಂಗಲಾಳ ಒಂದು ಜೊತೆ ಬಳೆ ಎಲ್ಲ ವಾಪಸ್ ಕಳಿಸಿದ್ದ. ಮಾತ್ರ ನಾನು ಒಂದು ಹೋಟ್ಲು ಸೇರಿ ದುಡೀತಾ ಇದ್ದೇನೆ, ನನ್ನ ಬಗ್ಗೆ ಎಂತಸಾ ಚಿಂತೆ ಬೇಡ ಅಂತಲೂ ಕಾಗದ ಕೊಟ್ಟು ಕಳಿಸಿದ್ದ. ಆ ದಿವಸ ಸುಮಂಗಲಾ ದೇವರಿಗೆ ತುಪ್ಪದ ದೀಪ ಹಚ್ಚಿ ಬಿಕ್ಕಿ ಬಿಕ್ಕಿ ಕೂಗಿದ್ಲು. ಆ ದೃಶ್ಯ ಮೊನ್ನೆಮೊನ್ನೆ ನನ್ನ ಕಣ್ಣ ಮುಂದೆ ನಡ್ದ ಹಾಗುಂಟು. ಅನಂತ್ರ ಆಗಾಗ ಕಾಗದ ಹಾಕುದು, ಸ್ವಲ್ಪ ಸ್ವಲ್ಪ ದುಡ್ಡು ಕಳಿಸುದು ಎಲ್ಲ ಮಾಡ್ತಿದ್ದ. ಕೆಲವು ವರ್ಷಗಳ ಅನಂತರ ಆಗಾಗ ಊರಿಗೂ ಬಂದು ಹೋಗ್ಲಿಕ್ಕೆ ಸುರು ಮಾಡಿದ. ಕೆಲವು ವರ್ಷಗಳು ಹೋದ ನಂತ್ರ ಬೊಂಬಾಯಿಯಲ್ಲಿ ಅವನೇ ಒಂದು ಸ್ವಂತಕ್ಕೆ ಹೋಟ್ಲು ಇಟ್ಟ. ಮದುವೆ ಎಲ್ಲ ಅವನೇ ಮಾಡಿಕೊಂಡದ್ದು. ಊರಿನ ಹುಡುಗಿಯೇ. ಅಲ್ಲಿಯೇ ಹುಟ್ಟಿ ಬೆಳೆದವಳು. ನಮಿಗೆ ಸ್ವಲ್ಪ ಬೇಸರ ಇತ್ತು. ಆದ್ರೆ ಹುಡುಗಿ ಒಳ್ಳೆಯವಳು ಅಂತ ಸಮಾಧಾನ ಆಯ್ತು. ಅವಳನ್ನು ಮದುವೆ ಆದ ನಂತ್ರ ನೋಡಿ, ಅವ ಕಂಡಾಬಟ್ಟೆ ಡೆವಲಪ್ ಆದ. ಸ್ವಂತ ಮನೆ ಕಾರು ಎಲ್ಲ ಮಾಡಿಕೊಂಡ. ಊರಿನ ದೇವಸ್ಥಾನದ, ಭೂತ ಸ್ಥಾನದ ಅಭಿವೃದ್ಧಿಗೆ ಭಾರೀ ಖರ್ಚು ಮಾಡಿದ. ವರ್ಷ ವರ್ಷ ಎಪ್ರಿಲ್ ಮೇ ತಿಂಗಳಲ್ಲಿ ಹೆಂಡತಿ ಮಕ್ಕಳ ಸಮೇತ ಊರಿಗೆ ಬರ್ತಿದ್ದ. ಬೇರೆ ಬೇರೆ ದೇವಸ್ಥಾನಗಳಿಗೆ ಹೋಗೋದೇನು, ದಾನ ಧರ್ಮ ಮಾಡೂದೇನು ಎಲ್ಲ ಜೋರಿತ್ತು. ನಂಗೇನೂ ದೇವಸ್ಥಾನಗಳಿಗೆ ಹೋಗೂದು ಅಂಥ ಉಮೇದಿ ಇಲ್ಲ. ಆದ್ರೆ ಇವಳಿಗೆ ಸ್ವಲ್ಪ ಆಸೆಯಿತ್ತು. ಅವಳನ್ನು ಕಟೀಲು, ಕೊಲ್ಲೂರು ಧರ್ಮಸ್ಥಳ ಅಂತೆಲ್ಲ ಸುತ್ತಿಸಿದ್ದ. ಅವಳಿಗೆ ಆದ ಖುಷಿ ಅಷ್ಟಿಷ್ಟಲ್ಲ. ಅವನ ಮಕ್ಕಳಿಗೂ ಇವಳು ಅಂದ್ರೆ ಜೀವ. ಆದ್ರೆ ನನ್ನ ಹಣೆ ಬರಹ ಏನು ಸಾ ಚೆನ್ನಾಗಿರ್ಲಿಲ್ಲ.'

'ಯಾಕೆ ಏನಾಯ್ತು?'

'ಈಗ ಎರಡು ವರ್ಷಗಳ ಹಿಂದೆ ಇವಳಿಗೆ ಕ್ಯಾನ್ಸರ್ ಅಂತ ಗೊತ್ತಾಯ್ತು.'

'ಅಯ್ಯೋ.'

'ಹಾಂ ಸಾಧುಗಳೇ. ಹೆಳೆಗೆ ಎರಡು ದಿನ ಜ್ವರ ಬಂದದ್ದು. ಕಡೆಗೆ ಆ ಪರೀಕ್ಷೆ ಈ ಪರೀಕ್ಷೆ ಅಂತೆಲ್ಲ ಮಾಡಿದಾಗ ಗರ್ಭಕೋಶದ ಕ್ಯಾನ್ಸರ್ ಅಂತ ಗೊತ್ತಾಯಿತು. ಅದೂ ಸಾ ಮೂರನೆಯ ಹಂತದಲ್ಲಿ ಉಂಟು ಅಂತ ಗೊತ್ತಾಯಿತು. ಡಾಕ್ಟ್ರಿಗೆ ಕೇಳಿದಾಗ ಲಕ್ಷಗಟ್ಟಲೆ ಖರ್ಚು ಮಾಡಿದ್ರೆ ಒಂದಷ್ಟು